ಹಾನಗಲ್ ಸಣ್ಣ ನೀರಾವರಿ ಉಪ ವಿಭಾಗವನ್ನು ರದ್ದುಗೊಳಿಸಿರುವುದು

೫೬೧. ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾನಗಲ್ ಚಿಕ್ಕ ನೀರಾವರಿ ಉಪ ವಿಭಾಗವನ್ನು ರದ್ದುಗೊಳಿಸುವ ವಿಚಾರ ಸರ್ಕಾರದವರಲ್ಲಿದೆಯೇ,

ಆ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಮತ್ತು ಆ) ಈ ವಿಚಾರ ಪರಿಶೀಲನೆಯಲ್ಲಿದೆ.

ವಾಣಿಜ್ಯ ವಿದ್ಯಾಶಾಲೆಗಳಲ್ಲಿ ಶುಲ್ಕದ ಏರಿಕೆ

೫೬೨. ಶ್ರೀ ಐ.ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಾಣಿಜ್ಯ ವಿದ್ಯಾ ಶಾಲೆಗಳಲ್ಲಿ ಶುಲ್ಕದ ಏರಿಕೆ ಬಗ್ಗೆ ಪರಿಶೀಲಿಸಲು ಸರ್ಕಾರದವರು ದಿನಾಂಕ ೨೧-೧೨-೧೯೮೭ ರಂದು ಸಮಿತಿಯನ್ನು ನೇಮಿಸಿರುವುದು ನಿಜವೇ ?

ಆ) ಆತಹ ಸಮಿತಿಯಲ್ಲಿ ಮಹಿಳೆಯರಿಗೂ, ಹಿಂಜನ ಗಿರಿಜನರಿಗೂ ಪ್ರಾತಿನಿಧ್ಯವಿಲ್ಲದೇ ವಾಣಿಜ್ಯ ವಿದ್ಯಾಶಾಲೆಗಳ ಮಾಲೀಕರಿಗೆ ಮಾತ್ರ ಪ್ರಾತಿನಿಧ್ಯ ಒದಗಿಸಿರುವುದು ನಿಜವೇ ?

ಇ) ಎಲ್ಲರಿಗೂ ಪ್ರಾತಿನಿಧ್ಯ ಕೊಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪರಿಶೀಲಿಸುತ್ತದೆ

ತುಂಗಾ ಏತ ನೀರಾವರಿ ಯೋಜನೆ

೫೬೩. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಂಗಾ ಏತ ನೀರಾವರಿ ಯೋಜನೆ ಈಗ ಯಾವ ಹಂತದಲ್ಲಿದೆ ?

ಆ) ಇದರ ಅಂದಾಜು ವೆಚ್ಚವೆಷ್ಟು ?

ಇ) ಇದರಿಂದ ಎಷ್ಟು ಎಕರೆ ಪ್ರದೇಶಕ್ಕೆ ನೀರು ಒದಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಅನ್ವೇಷಣೆಯಲ್ಲಿದೆ.

ಆ) ಅಂದಾಜು ಇನ್ನೂ ಸಿದ್ಧವಾಗಿಲ್ಲ.

ಇ) ಯೋಜನಾ ರೂಪರೇಷೆಗಳು ನಿರ್ಧಾರವಾಗಿಲ್ಲ.